ಬಂದರು ಇಲಾಖೆಯ ನಿರ್ದೇಶಕರು ತಪ್ಪು ಪತ್ರ ಸಂಖ್ಯೆ ಬಿ.ಇಸಿ.ಸಿಐ.೭೧:೮೬-೮೭, ದಿನಾಂಕ ೨೪-೧೧-೮೬ರ ಪತ್ರದಲ್ಲಿ ಟೆಂಡರ್‌ನ್ನು ಕರೆದು ದಿನಾಂಕ ೩-೧೨-೮೬ನ್ನು ಟೆಂಡರಿನ ಕಡೆಯ ದಿನಾಂಕ

ವೆಂದು ನಿಗದಿಪಡಿಸಲಾಯಿತು. ಇದಕ್ಕೆ ಉತ್ತರವಾಗಿ ಕಲ್ಕತ್ತೆಯ ಮೆಸರ್ಸ್ ಜೋಸ್ ಪ್ರೆಜ್ಜಿಂಗ್ ಸರ್ವೀಸ್‌ರವರಿಂದ ಒಂದೇ ಒಂದು ಟೆಂಡರು ಬಂದಿರುತ್ತದೆ. ಈ ಟೆಂಡರು ಸರ್ಕಾರದ ಪರಿಶೀಲನೆಯಲ್ಲಿದೆ.

ಈ ಬಗ್ಗೆ ಸರ್ಕಾರವು ಲೇಫ್ಸದಲ್ಲಿ ನಿರ್ಣಯ ತೆಗೆದುಕೊಂಡು ಕೆಲಸವನ್ನು ಕೈಗೊಳ್ಳಲಾಗುವುದು.

(೬) ರೈತರು ಕಾರ್ಖಾನೆಗಳಿಗೆ ಸರಬರಾಜು ಮಾಡಿದ ಕಬ್ಬಿನ ಹಣಪಾವತಿಯಲ್ಲಿ ನಿಧಾನವಾಗಿರುವ ಬಗ್ಗೆ

ಶ್ರೀ ಮುಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಕರ್ನಾಟಕದಲ್ಲಿ ರೈತರಿಗೆ ಕೊಡ ಬೇಕಾಗುವ ಕಬ್ಬಿನ ಬಿಲ್ಲು ಕೊಡದಿರುವುದರಿಂದ ಆರ್ಥಿಕ ಮುಗ್ಗಟ್ಟಿಗೆ ಒಳಪಡಬೇಕಾಗಿದೆ. ೧೯೮೬-೮೭ರ ಸಾಲಿನಲ್ಲಿ ಪೂರೈಕೆ ಮಾಡಿರುವ ಕಬ್ಬು ಸುಲಿಸಿ ಸಕ್ಕರೆ ಮಾರಿ ಹಲವಾರು ದಿನ ಗಳಾದರೂ ಕೂಡ ಕಾರ್ಖಾನೆಗಳಿಂದ ರೈತರಿಗೆ ಕೊಡಬೇಕಾಗಿರುವ ಕಬ್ಬಿನ ಬಿಲ್ಲನ್ನು ಕೊಡದಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ರೈತರಿಗೆ ಕೊಡಬೇಕಾಗಿರುವ ಮುದ್ದತಿ ತೇವಣಿ ಗಳ ಮರುಪಾವತಿಯಲ್ಲಿ ಕೆಲವೊಂದು ಕಾರ್ಖಾನೆಗಳಿಂದ ತಡವಾಗಿರುವುದು, ರೈತವರ್ಗಕ್ಕೆ ಕೊಡ ಬೇಕಾಗಿರುವ ಬಾಕಿ ಹಣಕ್ಕೆ ಸರಕಾರದಿಂದ ಮಂಜೂರಾತಿ ಸಿಕ್ಕಿಲ್ಲವೆಂದು ಕೇಳಿಬರುತ್ತದೆ. ಈ ತಿಂಗಳ ೧೫ರ ಒಳಗಾಗಿ ರೈತರಿಗೆ ಸಲ್ಲಬೇಕಾಗಿರುವ ಬಾಕಿ ಹಣವನ್ನು ಸಂಪೂರ್ಣವಾಗಿ ಕೊಡುವಂತೆ ಆದೇಶ ಇಟ್ಟು, ಸರಕಾರ ಕೂಡಲೇ ಕ್ರಮ ಕೈಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಆರ್ ಎಲ್. ಜಾಲಪ್ಪ.—ಪರ್ಚೆಕ್ಯೂಲರಾಗಿ ಯಾವ ಕಾರ್ಖಾನೆ ಹಣ ಕೊಟ್ಟಿಲ್ಲವೆಂದು ಹೇಳಿಲ್ಲ. ನನಗೂ ಮತ್ತು ಮಾನ್ಯ ಕೈಗಾರಿಕಾ ಮಂತ್ರಿಗಳಿಗೆ ಕೆಲಕೆಲವು ಬರುತ್ತವೆ. ನನಗೆ ಸಂಬಂಧ ಪಟ್ಟ ಫ್ಯಾಕ್ಟರಿಗಳಲ್ಲಿ ಏನಾದರೂ ಕೊಡದೇ ಇದ್ದರೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡು ತ್ತೇನೆ. ಹಾಗೂ ಈ ವಿಷಯವನ್ನು ಕೈಗಾರಿಕಾ ಮಂತ್ರಿಗಳ ಗಮನಕ್ಕೂ ಕೂಡಾ ತರುತ್ತೇನೆ.

(೭) ಶಿವಮೊಗ್ಗ ಜಿಲ್ಲೆಯ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳನ್ನು ನೇಮಿಸುವ ಬಗ್ಗೆ

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ

೧) ನಿಟ್ಟೂರು ಪ್ರಾಥಮಿಕ ಆರೋಗ್ಯ ಕೇಂದ್ರ,
೨) ಸಂಪೆಕಟ್ಟೆ ಮೂರುಕೈ ಪ್ರಾಥಮಿಕ ಆರೋಗ್ಯ ಕೇಂದ್ರ,
೩) ನಗರ ಪ್ರಾಥಮಿಕ ಆರೋಗ್ಯ ಕೇಂದ್ರ,
೪) ಹೊಸನಗರ ಜನರಲ್ ಆಸ್ಪತ್ರೆ,
೫) ಕೊಡೂರು ಪ್ರಾಥಮಿಕ ಆರೋಗ್ಯ ಕೇಂದ್ರ,
೬) ಸೊನಲೆ ಪ್ರಾಥಮಿಕ ಆರೋಗ್ಯ ಕೇಂದ್ರ,

ಇವುಗಳಿಗೆ ಕೆಲ ವರ್ಷಗಳಿಂದ ವೈದ್ಯರೇ ಇರುವುದಿಲ್ಲ. ಈ ಪ್ರದೇಶಗಳು ಮಲೆನಾಡು ಪ್ರದೇಶ ವಾಗಿದ್ದು, ಚಿಕ್ಕಸಾಪೇಹಕ್ಕಲು, ಪರಾಹಿ, ಯೋಜನಾ ಪ್ರದೇಶವಾಗಿರುವುದರಿಂದ ಪ್ರತಿನಿತ್ಯ ಅಪಘಾತ ಗಳು ಸಂಭವಿಸುತ್ತಿದ್ದು, ಆಸ್ಪತ್ರೆ ಇದ್ದೂ ಜನರಿಗೆ ಪ್ರಯೋಜನ ಸಿಕ್ಕಿಲ್ಲ. ಆಲ್ಲದೇ ಮಂಗನ ಕಾಯಿಲೆಗೆ ಹೆಸರುವಾಸಿಯಾದ ಹೊಸನಗರ ತಾಲ್ಲೂಕಿನಲ್ಲಿ ಮೇಲ್ಕಂಡ ೬ ಆಸ್ಪತ್ರೆಗಳಲ್ಲಿ ವೈದ್ಯರು ಇಲ್ಲದೇ ಇರುವುದನ್ನು ಪುಲಬಾಳು ಸಾರಿ ಸಂಬಂಧಪಟ್ಟವರಿಗೆ, ಸರ್ಕಾರಕ್ಕೆ ತಿಳಿಸಿದಾಗ್ಯೂ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಆರೋಗ್ಯ ಇಲಾಖೆ ಮತ್ತು ಸರ್ಕಾರ ರಾಜ್ಯದಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಪ್ರಶ್ನಿಸಿ ಸದನದ ಗಮನ ಸೆಳೆಯುತ್ತಿದ್ದೇನೆ.